ESI.A.No. 103–2022

AW–1,

ದಿನಾಂಕಃ 18–07–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ– ಎದುರುದಾರರ ಪರವಾಗಿಃಶ್ರೀ. ಎ ಬಿ ಎನ್ ವಕೀಲರಿಂದ ಃ

ನಮ್ಮ ಸಂಸ್ಥೆಯು ಶೈಕ್ಷಣಿಕ ಸಂಸ್ಥೆಯಾಗಿರುತ್ತದೆ ಎಂದರೆ ಸರಿ . ಶಿಕ್ಷಣ ಸಂಸ್ಥೆಗಳಿಗೆ ಇ ಎಸ್ ಐ ಆಕ್ಟ್ ಅನ್ವಯವಾಗುತ್ತದೆ ಎಂದು ಗೆಜೆಟ್ ನೋಟಿಪಿಕೇಷನ್ ಆಗಿರುತ್ತದೆ ಎಂದರೆ ಸರಿ . ಸದರಿ ನೋಟಿಪಿಕೇಷನ್ ಜಾರಿಗೆ ಬಂದಾಗ ನಮ್ಮ ಸಂಸ್ಥೆಯು ಇ.ಎಸ್.ಐ. ಕೋಡ್ ನ್ನು ಪಡೆದುಕೊಂಡಿರುವುದಿಲ್ಲ. ಆದುದರಿಂದ 07.12.2015 ರಂದು ಸೋಷಿಯಲ್ ಸೆಕ್ಯೂರಿಟಿ ಆಫೀಸರ್ ನಮ್ಮ ಸಂಸ್ಥೆ ಗೆ ಭೇಟಿ ನೀಡಿರುತ್ತಾರೆ ಎಂದರೆ ಸರಿ . ಆ ಕಾಲಕ್ಕೆ ಶೀಲ ಎನ್ನುವವರು ನಮ್ಮ ಸಂಸ್ಥೆಯ ಪ್ರಾಂಶುಪಾಲರಾಗಿದ್ದು , ನಿರೀಕ್ಷಣೆ ಯ ಕಾಲಕ್ಕೆ ಹಾಜರಿದ್ದರು. ಮಾರ್ಚ್ 2011 ರಲ್ಲಿ ನಮ್ಮ ಸಂಸ್ಥೆ ಯಲ್ಲಿ 29 ಜನ ಕೆಲಸಗಾರರು ಇದ್ದರು ಎಂದರೆ ಸರಿ . ಸದರಿ ನಿರೀಕ್ಷಣೆಯ ನಂತರ ನಮ್ಮ ಸಂಸ್ಥೆ ಯನ್ನು ಇ.ಎಸ್.ಐ. ಕಾಯಿದೆ ಅಡಿಯಲ್ಲಿ ನೋಂದಾವಣೆ ಮಾಡುವಂತೆ ಸೂಚಿಸಿ ದಿನಾಂಕ 20.01.2016 ರಂದು ನೋಟೀಸ್ ನ್ನು ಎದುರುದಾರರು ನೀಡಿರುತ್ತಾರೆ ಎಂದರೆ ಸರಿ . ಆಗ ನಾವು KUSUMA ದ ಸದಸ್ಯರಾಗಿದ್ದು 2011 ರ ಗೆಜೆಟ್ ನೋಟಿಪಿಕೇಷನ್ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇವೆ ಎಂದು ಉತ್ತರವನ್ನು ನೀಡಿರುತ್ತೇವೆ ಎಂದರೆ ಸರಿ . ನಂತರ ಎದುರುದಾರರು ಖುದ್ದು ಸುನಾವಣೆಗೆ ಹಾಜರಾಗುವಂತೆ ಸಿ–18 ನೋಟೀಸ್ ನ್ನು ನೀಡಿರುತ್ತಾರೆ ಎಂದರೆ ಸರಿ . ಅದರಂತೆ ಮಂಜುನಾಥ ಪ್ರಸಾದ್ ರವರು ನಮ್ಮ ಪರವಾಗಿ ಖುದ್ದು ಸುನಾವಣೆಗೆ ಹಾಜರಾಗಿರುತ್ತಾರೆ ಎಂದರೆ ಸರಿ . ಸದರಿಯಮರು ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದು ತಿಳಿಸಿ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ . ಸದರಿ ರಿಟ್ ಅರ್ಜಿ ಮತ್ತು ಮೇಲ್ಮನವಿ ಎರಡೂ ಕೂಡ ವಜಾ ಆಗಿರುತ್ತದೆ ಎಂದರೆ ಸರಿ . ನಂತರ ನಾವು ಇ ಎಸ್ ಐ ಕಾಯಿದೆ ಅಡಿಯಲ್ಲಿ ನಮ್ಮ ಸಂಸ್ಥೆಯನ್ನು ನೋಂದಾಯಿಸಿ ವಂತಿಗೆಯನ್ನು ಏಪ್ರಿಲ್ 2017 ರಿಂದ ಕಟ್ಟುತ್ತಿದ್ದೇವೆ ಎಂದರೆ ಸರಿ . ಎದುರುದಾರರು ದಿನಾಂಕ 27.04.2016 ರಂದು ಸೆಕ್ಸನ್ 45–ಎ ಆದೇಶದ ಅಡಿಯಲ್ಲಿ ದಿನಾಂಕ 16.03.2012 ರಿಂದ 31.12.2015 ರವರಗೆ 8,94,446/– ರೂಪಾಯಿಗಳನ್ನು ಮತ್ತು 31.10.2018 ರಂದು ಮತ್ತೊಂದು ಆದೇಶವನ್ನು ಹೊರಡಿಸಿ 01.01.2016 ರಿಂದ 31.07.2018 ರವರೆಗೆ 6,00,279/– ರೂಪಾಯಿಗಳನ್ನು ಕಟ್ಟಬೇಕೆಂದು ಸೂಚಿಸಿದನ್ನು ಈ ನ್ಯಾಯಾಧೀಕರಣದ ಮುಂದೆ ಪ್ರಶ್ನಿಸಿರುತ್ತೇವೆ ಎಂದರೆ ಸರಿ .

ಸದರಿ ಅವಧಿಗೆ ನಮ್ಮ Wage Register, Attendance Register and Profit and Loss Account ಆಧಾರದ ಮೇರೆಗೆ ವಂತಿಗೆಯನ್ನು ಕಟ್ಟಲು ನಾವು ತಯಾರಿರುತ್ತೇವೆ ಎಂದರೆ ಸರಿ .

ಮರು ವಿಚಾರಣೆ: ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ.ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.